## ಸಿವಿಲ್ ಜಡ್ಜ್ ಹಾಗೂ ಹೆ. ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ

## ಅಸಲು ದಾವಾ ಸಂಖ್ಯೆ :383/2017

**ಸಾಕ್ಷಿದಾರರ ಹೆಸರು** : ರಮೇಶ್ **DW**-2
**ತಂದೆಯ ಹೆಸರು** : ಗೋವಿಂದಪ್ಪ
**ವಯಸ್ಸು** : 51 ವರ್ಷ
**ಉದ್ಯೋಗ** : PDO
**ವಾಸಸ್ಥಳ** : ಬಾವಿಕೆರೆ

**ದಿನಾಂಕಃ05-08-25 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಪ್ರತಿವಾದಿ ಪರ ಶ್ರೀ. GM ವಕೀಲರಿಂದ ::**

ನ್ಯಾಯಾಲಯದಿಂದ ನನಗೆ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಹಾಗೂ ಕೆಲವು ದಾಖಾಲತಿಗಳನ್ನು ಹಾಜರುಪಡಿಸಲು ಸಮನ್ಸ್ ಬಂದ ಮೇರೆಗೆ ನಾನು ಸಾಕ್ಷಿ ನುಡಿಯಲು ನ್ಯಾಯಾಲಯದಲ್ಲಿ ಹಾಜರಾಗಿದ್ದು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ನಮ್ಮ ಗ್ರಾಮ ಪಂಚಾಯಿತಿಯ 1995-96 ರಿಂದ ಇಲ್ಲಿನವರೆಗಿನ assessment ರಿಜಿಸ್ಟರ್ ಅನ್ನು ಈ ದಿನ ನ್ಯಾಯಾಲಯಕ್ಕೆ ತಂದಿದ್ದು, ಅದಕ್ಕೂ ಹಾಗೂ ನ್ಯಾಯಾಲಯದಲ್ಲಿ ಈಗಾಗಲೇ ಹಾಜರುಪಡಿಸಿರುವ ನಿಡಿ1 ದಾಖಲಾತಿಗೂ ಹೊಲಿಕೆ ಇರುತ್ತದೆ. ನಿಡಿ1 ರಲ್ಲಿ ಇರುವ ನಮೂದಿಗೆ ಸಂಬಂಧಪಟ್ಟಂತೆ ಪ್ರತಿವಾದಿಯು ಮೊದಲಿನಿಂದ ಪಂಚಾಯಿತಿಗೆ ಕಂದಾಯ ಪಾವತಿ ಮಾಡುತ್ತಾ ಬಂದಿರುತ್ತಾರೆ. ಸಾಕ್ಷಿಯು ಒಂದು ಕಂದಾಯ ಪಾವತಿ ರಶೀದಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ.13 ಎಂದು ಗುರುತಿಸಲಾಯಿತು.

**:: ಪಾಟೀ ಸವಾಲು :: ವಾದಿ ಪರ ಶ್ರೀ.ARK ವಕೀಲರಿಂದ ::**

ನಿಡಿ1 ರಲ್ಲಿನ ನಮೂದು ಯಾವ ಆಧಾರದಲ್ಲಿ ಆಗಿರುತ್ತದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಡಿ1 ರ ನಮೂದಿಗೆ ಸಂಬಂಧಪಟ್ಟಂತೆ ಮೂಲ ದಾಖಲಾತಿಗಳು ನಮ್ಮ ಕಚೇರಿಯಲ್ಲಿ ಇರುವುದಿಲ್ಲ ಎಂದರೆ ಸರಿ. ಕಂದಾಯ ಪಾವತಿ ಮಾಡಿಸಿಕೊಳ್ಳುವ

ಸಮಯದಲ್ಲಿ ನಾವು ಸ್ಥಳ ಪರಿಶೀಲನೆ ಮಾಡಿಯೇ ಕಂದಾಯ ಪಾವತಿ ಮಾಡಿಸಿಕೊಳ್ಳುತ್ತೇವೆ. ನಿಡಿ13 ಮಾಡುವ ಪೂರ್ವದಲ್ಲಿ ನಾನು ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿರುವುದಿಲ್ಲ, ಅದರೆ ನಮ್ಮ ಸಿಬ್ಬಂದಿ ವರ್ಗದವರು ಮಾಡಿರುತ್ತಾರೆ. ಯಾವ ಸಿಬ್ಬಂದಿ ಹೋಗಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ ಮತ್ತು ಲಿಖಿತವಾಗಿ ಆ ರೀತಿ ಸ್ಥಳ ಪರಿಶೀಲನೆ ಮಾಡಿರುವ ಬಗ್ಗೆ ನಮ್ಮ ಬಳಿ ಯಾವುದೇ ವರದಿ ಇರುವುದಿಲ್ಲ. ಪ್ರತಿವಾದಿ ಅವರದೆಂದು ಹೇಳುತ್ತಿರುವ ಸ್ವತ್ತು ಅಸ್ತಿತ್ವದಲ್ಲಿ ಇರುವುದಿಲ್ಲ ಮತ್ತು ನಮ್ಮ ಕಚೇರಿಯಿಂದ ಯಾವುದೇ ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಡಿ1 ರಲ್ಲಿ ಕಂಡು ಬರುವ ಸ್ವತ್ತನ್ನು ನಮ್ಮ ಪಂಚಾಯಿತಿಯಿಂದ ಅಥವಾ ಸರ್ಕಾರದಿಂದ ಪ್ರತಿವಾದಿಗೆ ಮಂಜೂರಿ ಮಾಡದಿದ್ದರೂ ಸುಳ್ಳು ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ಜೊತೆ ಶಾಮಿಲಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**: ಮರುವಿಚಾರಣೆ ಇಲ್ಲ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: